(ಶ್ರೀ ಡಿ. ದೇವರಾಜ ಅರಸ್)

ಎಂಬುದನ್ನು ನೋಡಿಕೊಂಡು ಅದರಮೇಲೆ ನಾವು ಕೆಲಸ ಮಾಡಬೇಕಾಗುತ್ತದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿಯೂ ಇನ್ನೂ ಯಾವ ಹಾಲಿನ ಡೈರಿಯನ್ನೂ ಮಾಡಿಲ್ಲ. ಎರ್ನಾ ಕಡೆಗಳಲ್ಲಿಯೂ ಹಾಲಿನ ಡೈರಿಗಳನ್ನು ಮಾಡಬೇಕೆಂದು ನಮಗೆ ಆಸಕ್ತಿ ಇದೆ. ಹಣದ ಅಭಾವ ಇರುವುದರಿಂದ ಎರ್ನಾಕಡೆಗಳಲ್ಲಿಯೂ ಮಾಡುವುದು ಸ್ವಲ್ಪ ನಿಧಾನವಾಗುತ್ತದೆ. ಅಮೃತಮಹಲ್ ಜಮೀನು ಇರುವ ಕಡೆ ಖಾಸಗೀ ಜನರು ಹಾಲಿನ ಡೈರಿ ಫಾರಂ ಮಾಡಬೇಕೆಂದು ಮುಂದೆ ಬಂದರೆ ಅವರಿಗೆ ಸಹಾಯ ಮಾಡೋಣವೆಂದು ಸರ್ಕಾರದ ಗಮನದಲ್ಲಿದೆ. ಮತ್ತು ತಾಲ್ಲೂಕ್ ಬೋರ್ಡ್ ವತಿಯಿಂದ ಸರ್ಕಾರದವರು ಸಹಾಯ ಮಾಡಿ ಕೆಲವು ಕಡೆ ಪ್ರೈವೇಟ್ ಮಿಲ್ಕ್‌ಡೈರಿ ಪ್ರಾರಂಭ ಮಾಡಬೇಕೆಂದು ಸರ್ಕಾರದ ಗಮನದಲ್ಲಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಮದ್ರಾಸ್ ರಾಜ್ಯದಿಂದ ನಮ್ಮ ರಾಜ್ಯದ ಡೈರಿಗೆ ಹಾಲು ಬರುತ್ತದೆಯೆ ?

9-00 A.M.

ಶ್ರೀ ಡಿ. ದೇವರಾಜ ಅರಸ್.—ಈಗ ಮದ್ರಾಸ್ ರಾಜ್ಯದಿಂದ ಹಾಲು ಬರುತ್ತಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಶೀಘ್ರದಲ್ಲೇ 50,000 ಲೀಟರ್‌ಗಳನ್ನು ತಲುಪಲು ಸಾಧ್ಯವಾಗುತ್ತದೆಂದು ಹೇಳಿದ್ದೀರಿ. ಬೆಂಗಳೂರು ಡೈರಿಯನ್ನು ಪ್ರಾರಂಭ ಮಾಡಿದಾಗಲೇ ಸುಧಾರಿಸಿದ ಹಸುಗಳನ್ನು ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡಲಿಲ್ಲವೇ ; ಮತ್ತು ಒಂದು ನಿರಿಯಾದ ಪ್ಲಾನ್ ಹಾಕಿಕೊಳ್ಳಲಿಲ್ಲವೆ ? ಇನ್ನು ಮುಂದೆಯಾದರೂ ಸಹ ನಷ್ಟವಾಗದಂತೆ ಡೈರಿಯನ್ನು ನಡೆಸಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಒಂದು ಯೋಜನೆಯ ಮೇರೆಗೆ ಡೈರಿ ಪ್ರಾರಂಭ ಮಾಡಲ್ಪಟ್ಟಿತು. ಬರೀ ಹಸು ಮತ್ತು ಎಮ್ಮೆಗಳ ಹಾಲಿನಿಂದ ಡೈರಿಗೆ ಎಷ್ಟು ಹಾಲು ಬೇಕಾಗುತ್ತದೋ ಅಷ್ಟನ್ನು ಸಪ್ಲೈಮಾಡಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಡೈರಿ ಪ್ರಾರಂಭದಾಗ ನಾವು ಲೆಕ್ಕ ಹಾಕಿದಷ್ಟು ಹಾಲು ಬೆಂಗಳೂರಿನಿಂದ ಮತ್ತು ಬೆಂಗಳೂರಿನ ಸುತ್ತಮುತ್ತಲ ಹಳ್ಳಿಗಳಿಂದ ಬರಲಿಲ್ಲ. ಇದಕ್ಕೆ ಕಾರಣ ಎರಡು ವರ್ಷಗಳಿಂದ ಸರಿಯಾಗಿ ಮಳೆಯಾಗದೆ ಮೇವು ಹೆಚ್ಚು ಸಿಗಲಿಲ್ಲ, ಮತ್ತು ಹಾಲು ಸಹ ಸಪ್ಲೈ ಆಗಲಿಲ್ಲ. ಇತ್ತೀಚೆಗೆ ಹಾಲಿನ ಕೊಳ್ಳುವ ದರಗಳನ್ನು ಹೆಚ್ಚಿಸಿದ್ದರಿಂದ ಹಾಲು ಸಾಕಷ್ಟು ಬರುತ್ತಿದೆ. ಹಿಂದೆ ನಾನಾ ಕಾರಣಗಳಿಂದ ಹಾಲು ಡೈರಿಗೆ ಸಾಕಷ್ಟು ಬರುತ್ತಿರಲಿಲ್ಲ. ಇನ್ನು ಮೇಲೆ ಬರುತ್ತದೆ. ಆ ಭರವಸೆ ಇದೆ. ಸಿಬ್ಬಂದಿ ವರ್ಗದ ಮತ್ತು ಇತರ ಖರ್ಚುಗಳೂ ಸಾಕಷ್ಟು ಹಾಲು ಸಿಕ್ಕಿದರೆ ಸರಿಹೋಗುತ್ತದೆ, ಇಲ್ಲದಿದ್ದರೆ ನಷ್ಟವಾಗುತ್ತದೆ. ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ 20 ಸಾವಿರ ಮತ್ತು 15 ಸಾವಿರ ರೂಪಾಯಿಗಳ ನಷ್ಟವಾಗಿದೆ. ಇದಕ್ಕೆ ಮೊದಲು 80—90ಸಾವಿರ ರೂಪಾಯಿಗಳ ನಷ್ಟವಾಗುತಿತ್ತು. ಜನವರಿ ತಿಂಗಳಿನಿಂದ ಡೈರಿಗೆ ನಷ್ಟವಾಗದೆ ಲಾಭ ಬರುವ ನಿರೀಕ್ಷೆ ಇದೆ. ಈಗ ಹೆಚ್ಚು ಹಾಲು ಡೈರಿಗೆ ಬರುತ್ತಿರುವುದರಿಂದ ಅದನ್ನು ಜನರಿಗೆ ಸರಿಯಾಗಿ ಹಂಚುವುದೂ ಸಹ ಕಷ್ಟವಾಗುತ್ತಿದೆ.

Moodabidri and Moolky as Taluk Headquarters

114. Sri RATNA KUMAR KATTEMAR (Mudabidri).—

Will the Minister for Revenue and Forests be pleased to state :—

the decision taken by the Government to form Moodabidri and Moolky of South Kanara District as a new Taluk Headquarters ?

A.—Sri B. RACAHIAH (Minister for Revenue and Forests).—

It has been decided to defer the proposal for the present.

ಶ್ರೀ ರತ್ನಕುಮಾರ್ ಕಚ್ಚೆಮಾರ್.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ನದರಿ ನಲಹೆಯನ್ನು ನಧ್ಯಕ್ಕೆ ಮುಂದೂಡಲು ತೀರ್ಮಾನಿಸಲಾಗಿದೆಯೆಂದು ಹೇಳಿದ್ದೀರಿ, 10—15ವರ್ಷಗಳಿಂದ ಮೂಡಬಿದ್ರೆ ಮತ್ತು ಮೂಲ್ಕಿಗಳನ್ನು ತಾಲ್ಲೂಕಗಳನ್ನಾಗಿ ಮಾಡಬೇಕೆಂದು ಕೇಳುತ್ತಿದ್ದೇವೆ. ಈ ಬಗ್ಗೆ ಸರ್ಕಾರದವರ ಆಲೋಚನೆ ಏನಿದೆ?

†ಶ್ರೀ ಬಿ. ರಾಚಯ್ಯ.— ಹೊಸದಾಗಿ ತಾಲ್ಲೂಕುಗಳನ್ನು ಮಾಡಲು ಬಹಳ ಖರ್ಚು ಬರುತ್ತದೆ. ಆ ದೃಷ್ಟಿಯಿಂದ ಈಗ ಮಾಡುವುದು ಅವಶ್ಯಕತೆ ಇದ್ದರೂ ಸಹ ಸ್ವಲ್ಪ ಮುಂದಕ್ಕೆ ಹಾಕಲು ತೀರ್ಮಾನಿಸಲಾಗಿದೆಯೆಂದು ಉತ್ತರದಲ್ಲಿ ಹೇಳಿದೆ.

ಶ್ರೀ ಎಸ್. ಬಂಗಾರಪ್ಪ.—ಕೆಲವು ತಾಲ್ಲೂಕ್‌ಗಳು ಮತ್ತು ಜಿಲ್ಲೆಗಳಲ್ಲಿ ಆಲ್ಲಿಯ ತಹಶೀಲ್‌ದಾರರು ಮತ್ತು ಜಿಲ್ಲಾಧಿಕಾರಿಗಳು ತಾವು ಕೆಲಸ ಮಾಡುವುದು ಕಷ್ಟವಾಗಿದೆ, ತಮ್ಮ ಏರಿಯಾ ದೊಡ್ಡದು ಎಂದು ಸರ್ಕಾರಕ್ಕೆ ವರದಿ ಮಾಡಿದ್ದಾರೆ. ಅಲ್ಲದೆ ಅವರು ಅಷ್ಟೊಂದು ಸಮರ್ಪಕವಾಗಿ ಕೆಲಸ ಮಾಡಲು ತೊಂದರೆಯಾಗುವುದರಿಂದ ಈಗ ಇರತಕ್ಕಂಥ ತಾಲ್ಲೂಕ್‌ಗಳನ್ನು ಮತ್ತು ಜಿಲ್ಲೆಗಳನ್ನು ಹೆಚ್ಚಾಗಲೀ ಅಥವಾ ಕಡಮೆಯಾಗಲೀ ಮಾಡುತ್ತೀರಾ?

ಶ್ರೀ ಬಿ. ರಾಚಯ್ಯ.—ಈಗ ನೇಮಕವಾಗಿರುವ ಪೇ ಕಮೀಷನ್ನಿಗೆ ಒಬ್ಬ ಆಡ್ವೈಸರ್‌ನ್ನು ನೇಮಕ ಮಾಡಿದ್ದೇವೆ. ಅವರು ಗಡಿಗಳನ್ನು ಮತ್ತು ತಾಲ್ಲೂಕ್‌ಗಳನ್ನು ಏನಾದರೂ ಬದಲಾವಣೆ ಮಾಡಬೇಕೇ ಎಂಬ ಬಗ್ಗೆ ವರದಿಯನ್ನು ಸರ್ಕಾರಕ್ಕೆ ಕೊಟ್ಟಮೇಲೆ ಸರ್ಕಾರ ತೀರ್ಮಾನ ಮಾಡಬೇಕೆಂದಿದೆ.

ಶ್ರೀ ಬಿ. ವಿಠಲ್‌ದಾಸ ಶೆಟ್ಟಿ.—ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ, ಹೆಬ್ರಿ ಮತ್ತು ಮೂಡಬಿದ್ರೆ ಗಳನ್ನು ತಾಲ್ಲೂಕ್ ಕೇಂದ್ರಗಳನ್ನಾಗಿ ಮಾಡಬೇಕೆಂದು ಜಿಲ್ಲಾಧಿಕಾರಿಯವರಿಂದ ತಿಳಿದುಬಂದಿದೆಯೆ?

ಶ್ರೀ ಬಿ. ರಾಚಯ್ಯ.—ಬೈಂದೂರು ಮತ್ತು ಸೂಳ್ಯಗಳನ್ನು ತಾಲ್ಲೂಕುಗಳನ್ನಾಗಿ ಮಾಡಬೇಕೆಂದು ಜಿಲ್ಲಾಧಿಕಾರಿಯವರು ಹೇಳಿದ್ದರು. ಎರಡು ವರ್ಷಗಳ ಹಿಂದೆ ಸೂಳ್ಯವನ್ನು ತಾಲ್ಲೂಕ್ ಕೇಂದ್ರವಾಗಿ ಮಾಡಲಾಯಿತು. ಬೇರೆ ಪ್ರದೇಶಗಳ ಬಗ್ಗೆ ಪೇ ಕಮೀಷನ್ ಅವರಿಂದ ವರದಿ ಬಂದಮೇಲೆ ಮಾಡೋಣವೆಂದು ಮುಂದಕ್ಕೆ ಹಾಕಲಾಗಿದೆ.

ಶ್ರೀ ಬಿ. ವಿಠಲದಾಸ ಶೆಟ್ಟಿ.—ಕಾಂಗ್ರೆಸ್ ಸೋತ ಕಡೆ ಮಾತ್ರ ಹೊಸದಾಗಿ ತಾಲ್ಲೂಕ್‌ಗಳನ್ನು ಮಾಡಲು ಕಾರಣವೇನು?

ಶ್ರೀ ಬಿ. ರಾಚಯ್ಯ.—ಕಾಂಗ್ರೆಸ್ ಗೆದ್ದ ಕಡೆ ಮಾಡುತ್ತೀರಿ ಎಂದು ಅವರು ಕೇಳುತ್ತಾರೆ, ಆದ್ದರಿಂದ ಆ ರೀತಿ ಪ್ರಶ್ನೆ ಕೇಳಬಾರದು.

ಶ್ರೀ ರತ್ನಕುಮಾರ್ ಕಚ್ಚೇಮಾರ್.—ಕಾಂಗ್ರೆಸ್ ಸೋತ ಕಡೆ ಮಾಡುತ್ತಾರೆ ಎಂದು ಹೇಳುವುದು ಸರಿಯಲ್ಲ, ಆ ರೀತಿ ಮಾಡುವುದಾದರೆ ಮೂದಡಬಿದ್ರೆಯನ್ನು ತಾಲ್ಲೂಕ್ ಕೇಂದ್ರವನ್ನಾಗಿ ಮಾಡಿದರೆ ಒಳ್ಳೆಯದಾಗುತ್ತದೆ.

(No Answer)

Public Debt of Mysore Government

115. **Sri L. SRIKANTIAH** (Nanjangud).—

Will the Minister for Finance and Planning be pleased to state :—

(*a*) the public debt of the Government of Mysore as on 31st March 1950 together with interest ;

(*b*) the debts contracted or loans raised by the Government of Mysore year by year from 1950 to 1967 (yearwise from whom, the purpose and the rate of interest may be funished) ;